## ಪುರುಷ ಅಹಂಕಾರದ ಕೊಳೆ ತೊಳೆಯಬೇಕು

ಆಧುನಿಕ ಓದು, ಆರ್ಥಿಕ ಸಬಲತೆ ಹೆಣ್ಣುಮಕ್ಕಳನ್ನು ಒಂಟಿಯಾಗಿ ಬದುಕುವುದಕ್ಕೆ ಪ್ರೇರೇಪಿಸುತ್ತಿದೆ, ಹೀಗಾಗಿ ಅವರು ಮಕ್ಕಳನ್ನು ಹಡೆಯುತ್ತಿಲ್ಲ ಅನ್ನುವ ಪುರುಷಾಂಕಾರದ ಧೋರಣೆ ಮತ್ತೆ ಮುನ್ನೆಲೆಗೆ ಬಂದಿದೆ. ಇದರ ಜೊತೆಗೆ ಹೆಣ್ಣು ಪರಿಪೂರ್ಣವಾಗೋದು ಮಕ್ಕಳನ್ನು ಹೆತ್ತಾಗಲೇ, ಆಕೆ ಯಾವಾಗಲೂ ಮನೆಕೆಲಸ, ಗಂಡನ ಸೇವೆ ಮಕ್ಕಳ ಆರೈಕೆಯಲ್ಲೇ ತನ್ನ ಸಂತೋಷ ಕಾಣಬೇಕೆಂಬ ಅದೇ ಸನಾತನ ಸಣ್ಣತನ ಸಂಪ್ರದಾಯವಾಗಿ, ಸಿದ್ಧಾಂತವಾಗಿ ನಮ್ಮ ಸಮಾಜದಲ್ಲಿ ಆಚರಣೆಯಲ್ಲಿದೆ. ರಾಜಕಾರಣಿಗಳು, ಮಠಾಧೀಶರು, ಸನ್ಯಾಸಿ ಸ್ವಾಮೀಜಿಗಳು ರಕ್ತಶುದ್ಧಿಗೆ, ಧರ್ಮ ರಕ್ಷಣೆಗೆ ಹೆಣ್ಣುಮಕ್ಕಳು ಹತ್ತತ್ತು ಮಕ್ಕಳನ್ನು ಹೆರಬೇಕು ಅನ್ನುವ ಫತ್ವಾಗಳನ್ನು ಹೊರಡಿಸುತ್ತಲೇ ಇದ್ದಾರೆ.

ಇದೆಲ್ಲದರ ನಡುವೆ ದೇಶದ ಗತಿ ಅತ್ಯಂತ ಕೆಳಮಟ್ಟಕ್ಕೆ ಕುಸಿಯುತ್ತಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ದೇಶ ಅಧಃಪತನಕ್ಕಿಳಿಯುತ್ತಿದೆ. ನಿರುದ್ಯೋಗದ ಸಮಸ್ಯೆಯಿಂದ ದೇಶದ ಯುವಜನತೆ ಆತ್ಮಹತ್ಯೆ ದಾರಿ ಹಿಡಿಯುತ್ತಿದ್ದಾರೆ. ಮಕ್ಕಳನ್ನು ಹೆರುವ ಫತ್ವಾಗಳನ್ನು ಹೊರಡಿಸೋ ಇದೇ ರಾಜಕಾರಣಿಗಳಿಗೆ ಉದ್ಯೋಗ ಕೇಳಿದ್ರೆ ಇಷ್ಟೊಂದು ಜನರಿಗೆ ಸರ್ಕಾರ ಕೆಲಸ ಕೊಡೋಕಾಗುತ್ತಾ ಅನ್ನುತ್ತಾರೆ.

ಈ ಎಲ್ಲಾ ಸಮಸ್ಯೆಗಳ ಮೂಲ ಕಾರಣ ಜನಸಂಖ್ಯಾಸ್ಫೋಟ. ಈ ದೇಶದಲ್ಲಿ ಮದುವೆ ಅನ್ನೋದು ವ್ಯಾಪಾರವಾಗಿ, ಇಲ್ಲಿ ಒತ್ತಾಯಕ್ಕೂ ಮಕ್ಕಳಾಗುತ್ತವೆ, ಬೇಸರಕ್ಕೂ ಮಕ್ಕಳಾಗುತ್ತವೆ, ಟೈಂಪಾಸಿಗೂ ಮಕ್ಕಳಾಗುತ್ತವೆ. ಆದ್ರೆ ಒಂದು ಆರೋಗ್ಯಕರ ಜೀವನಶೈಲಿ ಇಲ್ಲ, ಬದುಕು ನರಕ ಆಗುವಾಗಲೂ ಜನರು ಮಕ್ಕಳನ್ನು ಹುಟ್ಟಿಸುವುದು ತಪ್ಪಿಸುವುದಿಲ್ಲ. ಹುಟ್ಟಿದ ಮಗುವಿಗೆ ಒಂದೊಳ್ಳೆ ಜೀವನ ರೂಪಿಸುವುದಂತೂ ಕನಸಿನ ಮಾತಾಗುತ್ತಿದೆ. ಆದರೆ ಇದ್ಯಾವುದನ್ನೂ ಲೆಕ್ಕಿಸದೇ ಹೆಣ್ಣು ಮನೆಯ ಹೊರಗೆ ಬರದಹಾಗೆ ಮಕ್ಕಳನ್ನ ಹೆತ್ತು ಕೊಡಬೇಕು. ಎಷ್ಟೇ ಓದಿದ್ದರೂ, ಉನ್ನತ ಕೆಲಸದಲ್ಲಿದ್ದರೂ ಮನೆಗೆಲಸ ಮಕ್ಕಳನ್ನು ಪಾಲಿಸುವ ಕೆಲಸ ಹೆಣ್ಣುಮಕ್ಕಳದ್ದೇ ಅನ್ನುವ ಧೋರಣೆ ಬದಲಾಗಿಲ್ಲ. ವಿದ್ಯಾವಂತರೂ ಇದಕ್ಕೆ ಹೊರತಾಗಿಲ್ಲ. ಮಕ್ಕಳನ್ನು ಮಾಡೋದೇ ಪ್ರತಿಷ್ಠೆಯಾಗಿ, ಗಂಡಸ್ತನದ ಸಂಕೇತವಾಗಿ ಸಮಾಜ ಅದನ್ನೇ ಮೌಲ್ಯವೆಂಬಂತೆ ಬಿಂಬಿಸುತ್ತಾ ಹೆಣ್ಣುಮಕ್ಕಳನ್ನು ಹೆರುವ ಯಂತ್ರಗಳನ್ನಾಗಿ ಮಾಡುತ್ತಿದ್ದಾರೆ.

ದೇಶದ ಉದ್ಧಾರಕ್ಕಾಗಲಿ, ನೆಮ್ಮದಿಯ ಬದುಕಿಗಾಗಲಿ ಹೆಣ್ಣು ಹೆರುತ್ತಾ ಕೂರುವ ಅಗತ್ಯವಿಲ್ಲ. ತನ್ನ ವಿದ್ಯಾಭ್ಯಾಸ, ಆರ್ಥಿಕ ಸಬಲತೆಯತ್ತ ಗಮನ ಹರಿಸಬೇಕು. ಮಕ್ಕಳು ಮಾಡಿಕೊಳ್ಳೋದು ಅವರ ಆಯ್ಕೆಯಾಗಬೇಕೇ ಹೊರತು ಅನಿವಾರ್ಯವಾಗಬಾರದು. ರಕ್ತಶುದ್ಧಿ, ವಂಶ ಬೆಳೆಸುವ ಜವಾಬ್ದಾರಿಯೆಂಬ ಮೌಢ್ಯಗಳಿಂದ ಸಮಾಜ ಹೊರಗೆ ಬಂದು ಒಂದು ಆರೋಗ್ಯಪೂರ್ಣ ಸಂಬಂಧಗಳನ್ನು, ಬದುಕನ್ನು ಕಟ್ಟಿಕೊಂಡ ದಿನ ಈ ದೇಶ ನಿಜಕ್ಕೂ ಉದ್ಧಾರವಾಗುತ್ತೆ. ಎಲ್ಲಕ್ಕಿಂತ ಹೆಚ್ಚಾಗಿ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು, ಆರ್ಥಿಕವಾಗಿ ಸದೃಢವಾಗಬೇಕು. ಆಗ ಮಾತ್ರ ಈ ಪುರುಷ ಅಹಂಕಾರದ ಕೊಳೆಯನ್ನು ತೊಳೆದು ಒಂದು ಸಮಾನತೆಯ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ.



ಮಂಜುಳಾ ಹುಲಿಕುಂಟೆ
ಕವಯಿತ್ರಿ

### ಮಕ್ಕಳ ಬೆಳೆಸುವುದೇ ಗುರಿಯೇ?

ಮಕ್ಕಳು ಮಾಡಿಕೊಳ್ಳುವುದನ್ನು ಏಕೆ ಮುಂದೂಡುತ್ತಿದ್ದಾರೆ?

ಮಕ್ಕಳನ್ನು ಬೆಳೆಸುವುದು ಸುಲಭವಲ್ಲ, ಅದು ಬಹಳ ಸಮಯ ಬೇಡುವ ಕೆಲಸ. ಮಕ್ಕಳಿಗೆ ಆರೈಕೆ ಮಾಡುವುದು ಕೂಡ ಈಗ ಹೆಂಗಸರ ಏಕಮೇವ ಗುರಿಯಾಗಿ ಉಳಿದಿಲ್ಲ. ಮಕ್ಕಳು ಹೇಗೋ ಹುಟ್ಟಿ, ಹೇಗೋ ಬೆಳೆದುಕೊಳ್ಳುತ್ತಾರೆ ಎಂಬ ಅಜಾಗರೂಕತೆಯ ಕಾಲ ಈಗ ಮುಗಿದುಹೋಗಿದೆ. ಜನನ ನಿಯಂತ್ರಣಕ್ಕೆ ಹತ್ತಾರು ತೆರೆದ ಆಯ್ಕೆಗಳಿವೆ. ಯಾರೋ ಹೇಳಿದರೆಂದು ಅಥವಾ ಯಾರಾದರೂ ಏನಾದರೂ ಅಂದುಕೊಳ್ಳುತ್ತಾರೆಂದೂ ಈಗ ಮಕ್ಕಳನ್ನು ಮಾಡಿಕೊಳ್ಳಬೇಕಿಲ್ಲ. ತನಗೆ ಬೇಕಿದ್ದರೆ ಮಾತ್ರ ವಿವಾಹದ ಮೊಹರಿರಲಿ, ಇಲ್ಲದಿರಲಿ ಮಗುವನ್ನು ಭೂಮಿಗೆ ತರಬಹುದು ಎಂಬ ಆಯ್ಕೆಯನ್ನು ಹೆಚ್ಚು ಹೆಚ್ಚು ಹೆಂಗಸರು ಈಗ ಮುಕ್ತವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಹೆಣ್ಣಿನ ದೇಹದ ಆಯ್ಕೆ–ಸಾಧ್ಯತೆಗಳನ್ನು ಅವಳಿಗೇ ಬಿಟ್ಟುಕೊಡಲು ಕೆಲವರಿಗೆ ಏಕಿಷ್ಟು ಕಷ್ಟವಾಗುತ್ತಿದೆ ಎಂಬುದೇ ಅರ್ಥವಾಗುವುದಿಲ್ಲ.

### ಪಾಶ್ಚಿಮಾತ್ಯ ದೇಶಗಳಲ್ಲಿ ಹೇಗಿದೆ?

ಪೂರ್ವವಿರಲಿ ಪಶ್ಚಿಮವಿರಲಿ ಹೆಣ್ಣಿನ ಚಲನವಲನಗಳ ಮೇಲೆ, ಆಕೆ ತೆಗೆದುಕೊಳ್ಳಬಹುದಾದ ಮತ್ತು ತೆಗೆದುಕೊಳ್ಳಬಾರದ ಸ್ವಾತಂತ್ರ್ಯದ ಮೇಲೆ ಕಣ್ಣಿಟ್ಟು ಆಕೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಒಂದು ಗುಂಪು ಸದಾ ಸಿದ್ಧವಾಗಿರುತ್ತದೆ. ಅಮೆರಿಕದ ಟೆಕ್ಸಾಸ್ ರಾಜ್ಯದಲ್ಲಿ ಗರ್ಭಧಾರಣೆಯ ಆರು ವಾರಗಳ ನಂತರ ಗರ್ಭಪಾತ ಮಾಡಿಸುವ ಹಾಗಿಲ್ಲ ಎಂಬ ಹೊಸ ಕಾನೂನು ಬಂದಿದೆ. ಅತ್ಯಾಚಾರಕ್ಕೊಳಗಾದ ಮಹಿಳೆಗೂ ಈ ನಿಯಮ ಅನ್ವಯಿಸುತ್ತದೆ. ಆರು ವಾರಗಳಲ್ಲಿ ಎಷ್ಟೋ ಹೆಂಗಸರಿಗೆ ಗರ್ಭಧಾರಣೆಯ ವಿಷಯವೇ ಗೊತ್ತಾಗಿರುವುದಿಲ್ಲ. ತಾವು ಜೀವಪರ ಎಂದು ಹೇಳಿಕೊಳ್ಳುತ್ತಲೇ ಹೆಂಗಸರ ಆಯ್ಕೆಗಳ ಮೇಲೆ ಪಾರಮ್ಯ ಸಾಧಿಸಲು ಈ ದೇಶ ಆ ದೇಶ, ಈ ಸಂಸ್ಕೃತಿ ಆ ಸಂಸ್ಕೃತಿ ಎಂಬ ಭೇದಭಾವವೇ ಇಲ್ಲ. ಇನ್ನೂ ಹುಟ್ಟದ ಭ್ರೂಣಕ್ಕೆ ಹೆಣ್ಣಿನ ಜೀವಕ್ಕಿಂಥ, ಆಕೆಯ ಆಯ್ಕೆಗಿಂಥ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ.

ಅಮೆರಿಕದಲ್ಲಿಯೂ ಒಂದು ಗುಂಪು ಆಗಾಗ ಕೌಟುಂಬಿಕ ಮೌಲ್ಯಗಳ ಮೇಲೆ ಲೆಕ್ಚರ್ ಕೊಡುತ್ತಲೇ ಇರುತ್ತದೆ. ಆದರೆ ಅವರ ಮಾತಿಗೆ ಕಿವಿಗೊಡದೇ ತಮ್ಮ ಪಾಡಿಗೆ ತಾವು ಕುಟುಂಬದ ಒಳಗಿದ್ದೂ ಹೊರಗಿದ್ದೂ ನೆಮ್ಮದಿ ಪಡೆದುಕೊಂಡವರಿದ್ದಾರೆ. ಇಲ್ಲಿಯೂ ಆಗಾಗ ಹೆಂಗಸರು ಹೇಗಿರಬೇಕು ಎಂಬ ಬಗ್ಗೆ ರಾಜಕಾರಣಿಗಳು ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುವುದು, ನಂತರ ಕ್ಷಮೆ ಯಾಚಿಸುವ ನೆವದಲ್ಲಿ ಏನೋ ಹೇಳಲು ಹೋಗಿ ಇನ್ನೇನೋ ಹೇಳಿ ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸುವುದು, 'ನನಗೂ ಮಗಳಿದ್ದಾಳೆ. ಹೆಂಡತಿ, ತಾಯಿ, ತಂಗಿ ಎಲ್ಲರೂ ಇದ್ದಾರೆ, ನಾನೆಷ್ಟು ಒಳ್ಳೆಯವನು' ಎಂದು ಅವಲತ್ತುಕೊಳ್ಳುವುದು ನಡೆಯುತ್ತಲೇ ಇರುತ್ತದೆ. ಹೆಣ್ಣನ್ನು ಮಗಳು, ತಾಯಿ ಮುಂತಾದ ಸಂಬಂಧದ ಎಳೆಗಳಲ್ಲಷ್ಟೇ ನೋಡದೇ ಆಕೆಯನ್ನೂ ಒಬ್ಬ ವ್ಯಕ್ತಿಯನ್ನಾಗಿ ನೋಡಬೇಕೆಂಬ ಅರಿವು ಯಾವಾಗ ಮೂಡುವುದೋ ಕಾದು ನೋಡಬೇಕಿದೆ.

### ಮಾನಸಿಕ ಆರೋಗ್ಯದ ಮಹತ್ವ

ದೈಹಿಕ ಆರೋಗ್ಯದಷ್ಟೇ ಮಾನಸಿಕ ಸ್ವಾಸ್ಥ್ಯವೂ ನೆಮ್ಮದಿಯ ಜೀವನಕ್ಕೆ ಅಗತ್ಯ ಎಂಬ ಬಗ್ಗೆ ಹಲವಾರು ಸಮೀಕ್ಷೆಗಳು ನಡೆದಿವೆ. ಕೌಟುಂಬಿಕ ಮೌಲ್ಯಗಳನ್ನು ಉಳಿಸಿಕೊಂಡವರೆಲ್ಲ ಮಾನಸಿಕವಾಗಿ ಆರೋಗ್ಯವಾಗಿದ್ದಾರೆ ಎಂದು ವಾದಿಸುವುದು ಉದ್ಘಟತನವಾದೀತು. ಉಸಿರುಗಟ್ಟುವ ವಾತಾವರಣ ಕುಟುಂಬ ವ್ಯವಸ್ಥೆಯ ಒಳಗೇ ಇರಲಿ, ಹೊರಗೇ ಇರಲಿ ಮಾನಸಿಕ ಅಸ್ವಾಸ್ಥ್ಯ ಕಟ್ಟಿಟ್ಟ ಬುತ್ತಿ. ಇದು ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಅನ್ವಯಿಸುತ್ತದೆ. ಹಿಂದಿನ ಕಾಲದಲ್ಲಿ ಸಮಾಜಕ್ಕಂಜಿ ಸುಮ್ಮನಿದ್ದು ಹೆಂಗಸರು ತಮ್ಮನ್ನೇ ತಾವು ಬಲಿ ತೆಗೆದುಕೊಂಡಿದ್ದು ಕುಟುಂಬ ವ್ಯವಸ್ಥೆಯ ಒಳಗೇ ಅಲ್ಲವೇ? ಮಾನಸಿಕ ಅನಾರೋಗ್ಯಕ್ಕೆ ಚಿಕಿತ್ಸೆಯ ಅಗತ್ಯವಿರುವ ಕುರಿತು ಎಲ್ಲರಲ್ಲೂ ಜಾಗೃತಿ ಮೂಡುತ್ತಿರುವುದು ಸಂತಸದ ವಿಷಯ. ಆದರೆ ಅದಕ್ಕೂ ಕುಟುಂಬ ವ್ಯವಸ್ಥೆಗೂ ಮದುವೆ–ಮಕ್ಕಳು ಬೇಕಾಗಿಲ್ಲ ಎಂದು ನಿರ್ಧರಿಸುತ್ತಿರುವ ಮಹಿಳೆಯರಿಗೂ ಯಾವುದೇ